3

# ರಾಜ್ಯಗಳ ರಾಜ್ಯ

*" 'ಆ ರಾಜರ ಕಾಲದಲ್ಲಿ ಪರಲೋಕ ದೇವರು ಒಂದು ರಾಜ್ಯವನ್ನು ಸ್ಥಾಪಿಸುವನು; ಅದು ಎಂದಿಗೂ ಅಳಿಯದೂ, ಅದರ ಪ್ರಾಭಲ್ಯವು ಬೇರೆ ಜನಾಂಗಕ್ಕೆ ಕದಲಿ ಹೋಗದು, ಆ ರಾಜ್ಯಗಳನ್ನೆಲ್ಲಾ ಭಂಗಪಡಿಸಿ ನಿರ್ನಾಮ ಮಾಡಿ ಶಾಶ್ವತವಾಗಿ ನಿಲ್ಲುವದು' " (ದಾನಿಯೇಲ 2:44).*

*"ದೇವರು ನಮ್ಮನ್ನು ಅಂಧಕಾರದ ಧೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು" (ಕೊಲೊಸ್ಸೆ 1:13).*

ನಾಳೆಯದಿನ ಏನು ಸಂಭವಿಸುತ್ತದೆಂಬುದನ್ನು ತಿಳಿಯುವುದಕ್ಕೆ ನೀವು ನಿಜ ವಾಗಿಯೂ ಬಯಸುವಿರೋ? ಬಹುಶಃ ಇಲ್ಲ. ಒಂದೇ ಸಮಯದಲ್ಲಿ ಇಂದಿನ ಕರ್ತವ್ಯಗಳನ್ನೂ ನಾಳಿನ ಭವಿಷ್ಯದ ಚಿಂತೆಗಳನ್ನೂ ಹೊರುವಷ್ಟು ನಮ್ಮ ಭುಜಗಳು ವಿಸ್ತಾರವಾದವುಗಳಾಗಿರುವದಿಲ್ಲ! "ಆ ಹೊತ್ತಿನ ಕಾಟ ಆ ಹೊತ್ತಿಗೆ ಸಾಕು" (ಮತ್ತಾಯ 6:34) ಎಂದು ಕ್ರಿಸ್ತನು ಮತ್ತು ಸಾಮಾನ್ಯ ಭಾವನೆಯು ಬೋಧಿಸುತ್ತದೆ. ಬಹುಶಃ ಈ ಕಾರಣದಿಂದ ದೇವರು ಕೆಲವು ಜನರಿಗೆ ಮಾತ್ರವೇ ಸಮಯದ ಪರದೆಯನ್ನು ಹಿಂದೆ ಎಳೆದು, ಬರಲಿಕ್ಕಿದ್ದ ಘಟನೆಗಳ ಬಗ್ಗೆ ಇಣುಕು ನೋಟಗಳನ್ನು ಕೊಟ್ಟಿರಬಹುದು, ದೇವರು ಹಾಗೆ ಮಾಡಿದಾಗ, ಪರಿಶುದ್ಧಾತ್ಮನ ಅದ್ಭುತಕರವಾದ ಬಲದ ಮುಖಾಂತರ ಆತನು ಅದನ್ನು ಮಾಡಿದನು. ಅದು ಆತನ ದೈವಿಕ ಉದ್ದೇಶಗಳಿಗಾಗಿ ಇತ್ತು, ಮನುಷ್ಯನ ಕುತೂಹಲಕ್ಕಾಗಿ, ವೈಯಕ್ತಿಕ ಲಾಭಕ್ಕಾಗಿ ಇಲ್ಲವೇ ವ್ಯರ್ಥವಾದ ಭಾವೋದ್ವೇಗಕ್ಕಾಗಿ ಇರಲಿಲ್ಲ.

ಚರಿತ್ರೆಯಲ್ಲಿ ದೇವರು ತನ್ನ ಸೇವಕರುಗಳಲ್ಲಿ ಒಬ್ಬನಿಗಾಗಿ ಭವಿಷ್ಯದ ತೆರೆ ತೆರೆಯಲು ಆಯ್ದುಕೊಂಡ ಸಮಯಗಳಲ್ಲಿ ಒಂದು ದಾನಿಯೇಲ 2ರಲ್ಲಿ ದಾಖಲೆ ಮಾಡಲ್ಪಟ್ಟಿದೆ. ಈ ಅಧ್ಯಾಯಕ್ಕೆ "ಬರಲಿಕ್ಕಿದ್ದ ನಿತ್ಯ ರಾಜ್ಯದ ಒಂದು ಮುಂತಿಳಿಸುವಿಕೆ" ಎಂಬ ಶಿರೋ ನಾಮ ಕೊಡಬಹುದು.

ಬಬಿಲೋನಿನ ದೊಡ್ಡ ಅರಸನಾದ ನೆಬೂಕದ್ನೆಚ್ಚರನಿಗೆ, ಅವನನ್ನು ಬಹಳವಾಗಿ ತೊಂದರೆ ಪಡಿಸಿದ ಒಂದು ಕನಸು ಇತ್ತು. ಈ ಕನಸು ಅಸಾಮಾನ್ಯವಾಗಿ ಅರ್ಥ ಗರ್ಭಿತವಾದದ್ದಾಗಿರಬೇಕೆಂದು ತಿಳಿದು, ಅವನು ತನ್ನ ಕೋರ್ಟಿನ ಜ್ಞಾನಿಗಳನ್ನು ಕರೆದು, ಅವರಿಗೆ ಅದರ ಅರ್ಥವನ್ನು ತನಗೆ ಕೊಡಬೇಕೆಂದು ಕೇಳಿಕೊಂಡನು. ಅವರ ವ್ಯಾಖ್ಯಾನವು ಸರಿಯಾಗಿರುವದೆಂಬುದನ್ನು ಪರೀಕ್ಷಿಸಲು, ಅವರು ಮೊದಲು ಕನಸನ್ನು ಹೇಳಬೇಕೆಂದು, ಆಮೇಲೆ ತನಗೆ ಅದರ ಅರ್ಥ ಕೊಡಬೇಕೆಂದು ಅರಸನು ಒತ್ತಿಹೇಳಿದನು. "ಅರಸನೇ, ಕನಸಿನ ಅರ್ಥವನ್ನು ನಿನಗೆ ಹೇಳಲು ಸಿದ್ಧರಾಗಿರುವೆವು, ಆದರೆ ಮೊದಲು ನಿನ್ನ ಕನಸನ್ನು ಹೇಳು" ಎಂದು ಅವರು ಉತ್ತರಕೊಟ್ಟರು, ಹಟಮಾರಿತನದಿಂದ, ಅರಸನು, "ಇಲ್ಲ, *ನೀವು* ಕನಸನ್ನೂ ನನಗೆ ಹೇಳುಬೇಕು, ಆಮೇಲೆ ಅದರ ವ್ಯಾಖ್ಯಾನವನ್ನೂ ನನಗೆ

ಹೇಳಬೇಕು. ನೀವು ಕನಸನ್ನೂ ಅದರ ಅರ್ಥವನ್ನೂ ನನಗೆ ಹೇಳದಿದ್ದರೆ ನೀವು ಮರಣ ದಂಡನೆಗೆ ಗುರಿಯಾಗುವಿರಿ. ಆದರೆ ನೀವು ಕನಸನ್ನೂ ಮತ್ತು ಅದರ ಅರ್ಥವನ್ನೂ ನನಗೆ ಕೊಟ್ಟರೆ, ನೀವು ಕಾಣಿಕೆಗಳನ್ನೂ ಬಹುಮಾನಗಳನ್ನೂ ಮತ್ತು ದೊಡ್ಡ ಗೌರವವನ್ನೂ ಪಡೆದುಕೊಳ್ಳುವಿರಿ'' ಎಂದು ಹೇಳಿದನು. ಅರಸನ ಬೇಡಿಕೆಯು ಜ್ಞಾನಿಗಳನ್ನು ಇಕ್ಕಟ್ಟಿಗೆ ಸಿಲುಕಿಸಿತು. ಅವರು ಕನಸನ್ನು ಪ್ರಕಟಿಸಬೇಕಾಗಿತ್ತು ಮತ್ತು ಅದನ್ನು ವಿವರಿಸಬೇಕಾಗಿತ್ತು ಇಲ್ಲವೇ ಹಾಗೆ ಮಾಡಲು ತಮ್ಮ ಸಾಮರ್ಥ್ಯವಿಲ್ಲದ್ದನ್ನು ಒಪ್ಪಿಕೊಳ್ಳಬೇಕಾಗಿತ್ತು. ಅವರಿಗೆ ಬಹಳ ಅಗತ್ಯವಾಗಿದ್ದಾಗ ಈ ಅನ್ಯ ಮಾಟಮಂತ್ರ ತಂತ್ರವು ಅವರಿಗೆ ಸಹಾಯ ಮಾಡಲಿಲ್ಲ. ತಮ್ಮ ಮಾತಿಗೆ ಸೋತು ಹೋಗಿ, ನಾಚಿಕೆಗೆ ಗುರಿಯಾಗಿ, ದೀನರಾಗಿ ಮಾಡಲ್ಪಟ್ಟು, ಜ್ಞಾನಿಗಳು ಅರಸನಿಗೆ, ''ನಾವು ಅದನ್ನು ಮಾಡಲಾರೆವು. ನೀನು ನಮ್ಮಿಂದ ಅಸಾಧ್ಯವಾದದ್ದನ್ನು ಕೇಳಿದ್ದೀ'' ಎಂದು ಅರಿಕೆ ಮಾಡಿದರು. ಅವರ ಉತ್ತರದಿಂದ ರೋಷಗೊಂಡ ನೆಬೂಕದ್ನೆಚ್ಚರನು ಬಬಿಲೋನಿನ *ಸಕಲ* ವಿದ್ವಾಂಸರನ್ನು ಕೊಲ್ಲಬೇಕೆಂದು ಆಜ್ಞಾಪಿಸಿದನು.

ಅರಸನ ಮೈಗಾವಲಿನ ದಳಪತಿಯಾದ ಅರ್ಯೋಕನು ಮರಣದಂಡನೆಯನ್ನು ಜಾರಿಗೆ ತರಲು ಬಬಿಲೋನಿನಲ್ಲೆಲ್ಲಾ ಸಂಚರಿಸಿದನು. ಅವರು ದಾನಿಯೇಲನ ಬಳಿಗೆ ಬಂದರು. ದಾನಿಯೇಲನು ಕ್ರಿ.ಪೂ. 606ರಲ್ಲಿ ಯೆರೂಸಲೇಮಿನಿಂದ ಬಬಿಲೋನಿಗೆ ಸೆರೆಯಾಗಿ ತಂದ ಒಬ್ಬ ಇಬ್ರಿಯನಾಗಿದ್ದನು. ಮಹೋನ್ನತನಾದ ದೇವರನ್ನು ಆರಾಧಿಸುವವನೂ ಭಕ್ತಿಯಿಂದ ಗೌರವಿಸುವವನೂ ಆಗಿದ್ದನು. ನೆಬೂಕದ್ನೆಚ್ಚರನ ನಂಬಿಗಸ್ತ ಬುದ್ಧಿವಂತರಲ್ಲಿ ಒಬ್ಬನೆಂದು ಎಣಿಸಲ್ಪಟ್ಟವನೂ ಆಗಿದ್ದನು. ಮರಣ ದಂಡನೆಗಳಿಗೆ ಕಾರಣವನ್ನು ದಾನಿಯೇಲನು ತಿಳಿದುಕೊಂಡಾಗ, ನಿಜ ದೇವರಾದ ಯೆಹೋವನ ಬಲದ ಮುಖಾಂತರ ತಾನು ಕನಸನ್ನೂ ಮತ್ತು ಅದರ ವ್ಯಾಖ್ಯಾನವನ್ನೂ ಪ್ರಕಟಿಸಲಿಕ್ಕಾಗುವಂತೆ ತನ್ನನ್ನು ಅರಸನ ಬಳಿಗೆ ಕರೆದುಕೊಂಡು ಹೋಗ ಬೇಕೆಂದು ಕೇಳಿಕೊಂಡನು. ದಾನಿಯೇಲನು ತನಗೆ ದೇವರು ಕನಸನ್ನು ಮತ್ತು ಅದರ ಅರ್ಥವನ್ನು ತಿಳಿದುಕೊಳ್ಳಲು ಜ್ಞಾನವನ್ನೂ ಕೊಡಲಿಕ್ಕಾಗುವಂತೆ ದೇವರಿಗೆ ಪ್ರಾರ್ಥಿಸಲು ಅಲ್ಪ ಸಮಯವು ಕೊಡಲ್ಪಟ್ಟಿತು. ಅವನು ಕೂಡಲೇ ತನ್ನ ಭಕ್ತಿಯುಳ್ಳ ಸ್ನೇಹಿತರಾದ ಹನನ್ಯ, ಮಿಶಾಯೇಲು ಮತ್ತು ಅಜರ್ಯರನ್ನು ಕರೆಕಳುಹಿಸಿದನು. ಅವರು ನಮಗೆ ಶದ್ರಾಕ್, ಮೇಶಕ್ ಮತ್ತು ಅಬೇದ್‌ನೆಗೋ ಎಂದು ತಿಳಿಯಲ್ಪಟ್ಟಿದ್ದಾರೆ. ಕನಸನ್ನು ಮತ್ತು ಅದರ ಅರ್ಥವನ್ನು ಪ್ರಕಟಿಸುವಂತೆ ದೇವರನ್ನು ಪ್ರಾರ್ಥಿಸಲು ತನ್ನೊಂದಿಗೆ ಜತೆಗೂಡ ಬೇಕೆಂದು ಕರೆಯಲ್ಪಟ್ಟರು. ದೇವರು ಅವರ ಪ್ರಾರ್ಥನೆಗಳಿಗೆ ಉತ್ತರ ಕೊಟ್ಟನು; ರಾತ್ರಿ ಯಲ್ಲಿ, ದಾನಿಯೇಲನಿಗೆ ರಹಸ್ಯವಾದ ಕನಸಿಗೆ ವ್ಯಾಖ್ಯಾನವು ಕೊಡಲ್ಪಟ್ಟಿತು, ದೇವರಿಗೆ ಕೃತಜ್ಞತೆಗಳೂ ಸ್ತೋತ್ರವೂ ಕೊಡಲ್ಪಟ್ಟಿತು, ಮತ್ತು ಆಗ ಅರ್ಯೋಕನು ಅವನನ್ನು ನೆಬೂಕದ್ನೆಚ್ಚರನ ಸನ್ನಿಧಿಗೆ ಒಯ್ಯಲ್ಪಡಲು ಕೇಳಲ್ಪಟ್ಟನು. ರಹಸ್ಯವನ್ನು ಬೋಧಿಸುವ ಮೊದಲು, ದಾನಿಯೇಲನು ಅರಸನಿಗೆ, ಪರಲೋಕದ ದೇವರಿಂದ ಕನಸನ್ನು ಹೇಳುವ ಮತ್ತು ಅದರ ಅರ್ಥವನ್ನು ಕೊಡುವ ಸಾಮರ್ಥ್ಯವು ದೇವರಿಂದ ಬಂದಿರುವುದೆಂದು ಭರವಸೆಕೊಟ್ಟನು.

ಅರಸನನ್ನು ಪೀಡಿಸಿದ ಮತ್ತು ಚಕಿತಗೊಳಿಸಿದ ಕನಸು ಯಾವುದಾಗಿತ್ತು? ಅರಸನ ಕನಸು ''ಅನಂತರದ ದಿನಗಳಿಗೆ'' ಸಂಬಂಧಿಸಿತ್ತೆಂದು ದಾನಿಯೇಲನು ಹೇಳಿದನು (ದಾನಿಯೇಲು 2:28). ಅದು ಭವಿಷ್ಯವನ್ನು ಮುಂತಿಳಿಸಿದ ಕನಸಾಗಿತ್ತು. ನೆಬೂಕದ್ನೆಚ್ಚರನು ತನ್ನ ಕನಸಿನಲ್ಲಿ ಅದ್ಭುತವಾದ, ಥಳಥಳನೆ ಹೊಳೆಯುವ, ದೊಡ್ಡ ಪ್ರಿತಿಮೆಯನ್ನು ನೋಡಿದನೆಂದು ದಾನಿಯೇಲನು ಹೇಳಿದನು. ಆ ಪ್ರತಿಮೆಯ ತಲೆಯು

ಅಪರಂಜಿ, ಎದೆತೋಳುಗಳು ಬೆಳ್ಳಿ, ಹೊಟ್ಟೆ ಸೊಂಟಗಳು ತಾಮ್ರ, ಕಾಲುಗಳು ಕಬ್ಬಿಣ, ಹೆಜ್ಜೆಗಳು ಕಬ್ಬಿಣ ಮತ್ತು ಮಣ್ಣು ಆಗಿತ್ತು. ಮಾನವ ಕೈಗಳ ಸಹಾಯವಿಲ್ಲದೆ ಪರ್ವತದಿಂದ ಒಂದು ಗುಂಡು ಬಂಡೆಯು ಒಡೆದು ಬಂದದ್ದನ್ನು ಅರಸನು ನೋಡಿದ ನೆಂದು ದಾನಿಯೇಲನು ಹೇಳಿದನು. ಆ ಗುಂಡು ಬಂಡೆಯು ಆ ಪ್ರತಿಮೆಯ ಕಬ್ಬಿಣ ಮಣ್ಣಿನ ಹೆಜ್ಜೆಗಳಿಗೆ ಬಡಿದು ಚೂರುಚೂರು ಮಾಡಿತು. ಆಗ ಕಬ್ಬಿಣ ಮಣ್ಣು ತಾಮ್ರ ಬೆಳ್ಳಿ ಬಂಗಾರಗಳೆಲ್ಲವೂ ಪುಡಿಪುಡಿಯಾಗಿ ಸುಗ್ಗಿಯ ಕಣಗಳ ಹೊಟ್ಟಿನಂತಾದವು: ಗಾಳಿಯು ತೂರಿಕೊಂಡು ಹೋಗಲು ಅವುಗಳಿಗೆ ನೆಲೆಯೇ ಇಲ್ಲದಾಯಿತು; ಆ ಬಂಡೆಯು ಮಹಾಪರ್ವತವಾಗಿ ಬೆಳೆದು ಲೋಕವನ್ನೆಲ್ಲಾ ತುಂಬಿಕೊಂಡಿತು (ದಾನಿಯೇಲ 2:31-35).

ಈ ಕನಸಿನ ಅರ್ಥವೇನು? ಆ ಬಂಗಾರದ ತಲೆಯು ಅರಸ ನೆಬೂಕದ್ನೆಚ್ಚರನೆಂದು ದಾನಿಯೇಲನು ಹೇಳಿದನು (ದಾನಿಯೇಲ 2:38). ಬಬಿಲೋನಿನ ನಂತರ ಮೂರು ಇತರ ಬಲಶಾಲಿ ರಾಜ್ಯಗಳು ಎದ್ದು ಬರುವವೆಂದು ಅವನು ಹೇಳಿದನು: ಒಂದು ಬೆಳ್ಳಿಯಿಂದ, ಒಂದು ತಾಮ್ರದಿಂದ, ಮತ್ತು ಒಂದು ಮಣ್ಣಿನೊಂದಿಗೆ ಕಬ್ಬಿಣ ಮಿಶ್ರಿತವಾದದ್ದು ಪ್ರತಿನಿಧೀಕರಿಸಲ್ಪಡುವುದು.

ಅದ್ಭುತ ಪ್ರತಿಮೆಯ ಅರಸರುಗಳ ದಿನಗಳಲ್ಲಿ ಪರಲೋಕದಲ್ಲಿ ದೇವರು ಎಂದೆಂದಿಗೂ ನಾಶಪಡಿಸಲ್ಪಡಲಾರದಂಥ ರಾಜ್ಯವನ್ನು ಸ್ಥಾಪಿಸುವನು ಎಂದು ದಾನಿಯೇಲನು ವಿವರಿಸಿದನು. ಅದು ಇತರ ಎಲ್ಲಾ ರಾಜ್ಯಗಳಿಗಿಂತ ಮೇಲಾಗಿ ಏಳುವುದು ಮತ್ತು ಎಂದಿಗೂ ಅಳಿದು ಹೋಗುವುದಿಲ್ಲ (ದಾನಿಯೇಲ 2:44). ನೆಬೂಕದ್ನೆಚ್ಚರನ ಕನಸು ದಾನಿಯೇಲನ ಸಮಯದ ಅಂತ್ಯದವರೆಗಿನ ಇತಿಹಾಸದ ಮುಖ್ಯಾಂಶಗಳನ್ನು ಕೊಡುವುದಿಲ್ಲ; ಅದು ದಾನಿಯೇಲನ ದಿನದಿಂದ ದೇವರು ತನ್ನ ರಾಜ್ಯ ವನ್ನು ಸ್ಥಾಪಿಸುವ ಸಮಯದ ವರೆಗಿನ ಚರಿತ್ರೆಯ ಮುಖ್ಯಾಂಶಗಳನ್ನು ಕೊಡುತ್ತದೆ. ನಿತ್ಯವಾದ ರಾಜ್ಯವು ಜಗತ್ತಿನ ಎಲ್ಲಾ ರಾಜ್ಯಗಳ ಮೇಲೆ ಉನ್ನತವಾಗಿರುವುದು.

ನೆಬೂಕದ್ನೆಚ್ಚರನಿಗಿದ್ದ ಮತ್ತು ದಾನಿಯೇಲನು ವಿವರಿಸಿದ ಈ ಕನಸು ಬರಲಿಕ್ಕಿದ್ದ ದೇವರ ನಿತ್ಯರಾಜ್ಯದ ಬಗ್ಗೆ ಹಳೇ ಒಡಂಬಡಿಕೆಯ ಮಹಾ ಪ್ರವಾದನೆಗಳಲ್ಲಿ ಒಂದಾಗಿರುತ್ತದೆ. ಪರಲೋಕ ರಾಜ್ಯದ ಕುರಿತಾದ ಕಾಲದ ಗುರುತುಗಳಾದ ಸಂಗತಿಗಳು ಅದರೊಳಗೆ ಕಂಡುಬರುವವು. ಸಭೆಯ ಯಾವುದೇ ಅಧ್ಯಯನವು ಈ ಕನಸಿನ ಜಾಗರೂಕತೆಯ ಅಧ್ಯಯನವನ್ನು ಒಳಗೊಂಡಿರಬೇಕು, ಇದು ದೇವರ ರಾಜ್ಯದ ಸ್ವಭಾವದ ವಿಷಯಗಳನ್ನು ಒಳಗೊಂಡಿರಬೇಕು, ಇದು ದೇವರ ರಾಜ್ಯದ ಸ್ವಭಾವದ ವಿಷಯಗಳನ್ನು ಮಾತ್ರವೇ ಪ್ರಕಟಿಸುವುದಿಲ್ಲ, ಆದರೆ ಆತನ ರಾಜ್ಯವು ಸ್ಥಾಪಿಸಲ್ಪಡುವ ಸಮಯವನ್ನೂ ಸೂಚಿಸುವುದು.

## ಅದರ ಮೂಲದಲ್ಲಿ ದೈವಿಕವಾದದ್ದಾಗಿದೆ

ಪ್ರವಾದನೆಯು ದೇವರ ರಾಜ್ಯದ ದೈವಿಕ ಮೂಲವನ್ನು ಘೋಷಿಸುತ್ತದೆ, "ಆ ರಾಜರ ಕಾಲದಲ್ಲಿ *ಪರಲೋಕ ದೇವರು* ಒಂದು ರಾಜ್ಯವನ್ನು ಸ್ಥಾಪಿಸುವನು" (ದಾನಿಯೇಲ 2:44; ಒತ್ತಿ ಹೇಳಿದ್ದು ನನ್ನದು) ಎಂದು ದಾನಿಯೇಲನು ಹೇಳಿದನು. ರಾಜ್ಯವು ಪರಲೋಕದಿಂದ ಬರುವುದಾಗಿತ್ತು ಮತ್ತು ದೇವರಿಂದಲೇ ಸ್ಥಾಪಿಸಲ್ಪಡ ಬೇಕಾಗಿತ್ತು.

"[ಬೆಟ್ಟದೊಳಗಿಂದ] ಒಂದು ಗುಂಡು ಬಂಡೆಯು ಕೈಯಿಲ್ಲದೆ ಒಡೆಯಲ್ಪಟ್ಟದ್ದು" (ದಾನಿಯೇಲ 2:34), ರಾಜ್ಯವು ದೈವಿಕವಾದದ್ದರಿಂದ ಸ್ಥಾಪಿಸಲ್ಪಡುವುದು ಆದರೆ ಮಾನವ ಕೈಗಳಿಂದ ಅಲ್ಲ ಎಂಬುದನ್ನು ಸೂಚಿಸುತ್ತದೆ. ಅದು ಒಂದು ಪಾರಲೌಕಿಕವಾದ ರಾಜ್ಯವಾ

ಗಿರುವುದು, ಆದರೆ ಭೂಲೋಕದ್ದಾಗಿರುವುದಿಲ್ಲ. ಅದು ಮಾನವನ ಪ್ರಸಂಗದಿಂದ, ಯೋಜನೆಗಳಿಂದ ಇಲ್ಲವೇ ಗ್ರಹಿಕೆಗಳಿಂದ ಉತ್ಪಾದಿಸಲ್ಪಡುವದಿಲ್ಲ; ಆದರೆ ಅದು ಸಮಯದಲ್ಲಿ, ಭವಿಷ್ಯದಲ್ಲಿಯ ಒಂದು ಹಂತದಲ್ಲಿ ಅದ್ಭುತಕರವಾದ ಘಟನೆಯ ಮುಖಾಂತರ ಸ್ಥಾಪಿಸಲ್ಪಡುವುದು.

ಬರಲಿಕ್ಕಿದ್ದ ರಾಜ್ಯವನ್ನು ಕುರಿತ ಈ ಸತ್ಯವು *ಸಹಜವಾದ ಬಲವನ್ನು* ಅನ್ವಯಿಸುತ್ತದೆ. ದೇವರ ಬಲವು ಅದಕ್ಕೆ ವೈಶಿಷ್ಟ್ಯತೆ ಕೊಡುವುದು.

ಅದರ ಪರಿಶುದ್ಧ ಮೂಲವೂ ಸಹ ನಂಬಲರ್ಹ *ರಚನೆಯನ್ನು ಸೂಚಿಸುತ್ತದೆ.* ಜಗತ್ತಿನ ದೊಡ್ಡ ರಾಜ್ಯಗಳು ಬಿದ್ದು ಹೋಗುವ ಜ್ಞಾನದಿಂದಲೂ ಬುದ್ಧಿ ವಂತಿಕೆಯಿಂದಲೂ ಒಂದಾಗಿ ಕೂಡಿಸಲ್ಪಟ್ಟಿವೆ; ಆದರೆ ಕ್ರಿಸ್ತನ ರಾಜ್ಯವು ದೇವರ ಅಲೌಕಿಕ ಚಟುವಟಿಕೆಯಿಂದ ಸೃಷ್ಟಿಸಲ್ಪಡುವುದು ಮತ್ತು ನಾಶವಾಗದ ಗುಣಗಳನ್ನು ಹೊಂದಿಕೊಳ್ಳುವುದು.

ಅದರಂತೆಯೇ, ದೇವರ ರಾಜ್ಯದ ದೈವಿಕ ಸ್ವಭಾವವು ಅದರ *ಸ್ಥಿರವಾದ ಯಶಸ್ಸಿನ* ಭರವಸೆ ಕೊಟ್ಟಿರುವುದು. ದೇವರು ತನ್ನ ಪ್ರಥಮ ಪ್ರಯತ್ನದಲ್ಲಿ ಸೋತು ಹೋದ ಕಾರಣ ತನ್ನ ಸೃಷ್ಟಿಗಳನ್ನು ಪುನಃ ಮಾಡುವದನ್ನು ಇಲ್ಲವೇ ಪುನಃ ರೂಪಿಸುವದನ್ನು ಎಂದೆಂದಿಗೂ ಮಾಡಬೇಕಾಗಿರುವದಿಲ್ಲ.

ಆತನ ಕೆಲಸ ಮಾಡುವ ಕೈಗಳು,
ಎಂದೂ ಸೋತು ಹೋಗುವುದಿಲ್ಲ;
ಆತನು ಮಾತಾಡುವ ನಾಲಿಗೆಯು,
ಎಂದೂ ಜಾರುವುದಿಲ್ಲ;
ಆತನು ಬರೆಯು ಲೆಕ್ಕಣಿಯು,
ಎಂದೂ ಅಳಿಸಿ ಹೋಗುವುದಿಲ್ಲ.
ಆತನು ಹೇಳುವದೆಲ್ಲವೂ,
ಹೆಚ್ಚು ಉತ್ತಮವಾಗಿ ಹೇಳಲ್ಪಡಲಾರದು;
ಆತನು ಮಾಡುವುದೆಲ್ಲವೂ,
ಹೆಚ್ಚು ಉತ್ತಮವಾಗಿ ಮಾಡಲ್ಪಡಲಾರದು.

ದಾನಿಯೇಲನು ಮುಂತಿಳಿಸಿದ ರಾಜ್ಯವು ಮೇಲಿನಿಂದ ಕೆಳಗೆ ಕಳುಹಿಸಲ್ಪಡುವುದು. ದೈವಿಕ ಆಜ್ಞೆಯಿಂದ ಅದು ಚಲನೆಯಲ್ಲಿ ಇಡಲ್ಪಡುವುದು, ಮತ್ತು ತನ್ನ ಸೃಷ್ಟಿಕರ್ತನ ಜ್ಞಾನವನ್ನೂ ನಿತ್ಯತ್ವವನ್ನೂ ಪ್ರತಿಬಿಂಬಿಸುವುದು.

## ಅದರ ಸ್ಥಾಪನೆಯಲ್ಲಿ ಪ್ರವಾದಿಕವಾಗಿರುವುದು

ಪ್ರವಾದನೆಯು ರಾಜ್ಯದ ಸ್ಥಾಪನೆಯ ದೈವಿಕವಾಗಿ ಆಯಲ್ಪಟ್ಟ ಸಮಯವನ್ನೂ ಸಹ ಸ್ಪಷ್ಟವಾಗಿ ಹೇಳುತ್ತದೆ. "*ಆ ರಾಜರ ಕಾಲದಲ್ಲಿ* ಪರಲೋಕ ದೇವರು ಒಂದು ರಾಜ್ಯ ವನ್ನು ಸ್ಥಾಪಿಸುವನು; ಅದು ಎಂದಿಗೂ ಅಳಿಯದು" (ದಾನಿಯೇಲ 2:44; ಒತ್ತಿ ಹೇಳಿದ್ದು ನನ್ನದು) ಎಂದು ದಾನಿಯೇಲನು ಹೇಳಿದನು. ನಿರ್ದಿಷ್ಟವಾಗಿ, ದೇವರು ತನ್ನ ರಾಜ್ಯವನ್ನು ಪ್ರತಿಮೆಯಿಂದ ಪ್ರತಿನಿಧೀಕರಿಸಲ್ಪಟ್ಟ ಅರಸನ ದಿನಗಳಲ್ಲಿ ಸ್ಥಾಪಿಸುವನು, ಮತ್ತು ಅನ್ವಯದಿಂದ, ಇನ್ನೂ ಹೆಚ್ಚು ನಿರ್ದಿಷ್ಟವಾಗಿ, ನಾಲ್ಕನೆಯ ರಾಜ್ಯದ ದಿನಗಳಲ್ಲಿ ಸ್ಥಾಪಿಸುವನು.

ಜಗತ್ತಿನ ನಾಲ್ಕು ರಾಜ್ಯಗಳು ನೆಬೂಕದ್ನೆಚ್ಚರನ ಕನಸಿನಲ್ಲಿ ಚಿತ್ರಿಸಲ್ಪಟ್ಟಿವೆ. ನೆಬೂಕದ್ನೆಚ್ಚರನ ರಾಜ್ಯವು ಮೊದಲನೆಯದು (ದಾನಿಯೇಲ 2:37), ಒಂದು ಅವನ ನಂತರ ಬರುವಂಥದ್ದು (ದಾನಿಯೇಲು 2:39), ಮೂರನೆಯದು ಎರಡನೆಯದರ ನಂತರ ಬರುವುದು (ದಾನಿಯೇಲು 2:39), ಮತ್ತು ಆಮೇಲೆ ನಾಲ್ಕನೆಯ ರಾಜ್ಯವು ಬರಲಿಕ್ಕಿತ್ತು (ದಾನಿಯೇಲ 2:40-43).

ಬಬಿಲೋನಿನ ಸಾಮ್ರಾಜ್ಯವನ್ನು ಜಗತ್ತಿನ ಮೂರು ರಾಜ್ಯಗಳು ಅನುಸರಿಸಿದ ವೆಂಬುದನ್ನು ಪ್ರಪಂಚದ ಇತಿಹಾಸವು ದೃಢಪಡಿಸುತ್ತದೆ. ಅವು ಮೇದ್ಯ - ಪರ್ಶಿಯನ್, ಗ್ರೀಕ್, ಮತ್ತು ರೋಮನ್ ಸಾಮ್ರಾಜ್ಯಗಳು. ಎರಡನೆಯ ಮತ್ತು ಮೂರನೆಯ ರಾಜ್ಯ ಗಳು, ಮೇದಿಯ - ಪರ್ಶಿಯನ್ ಮತ್ತು ಗ್ರೀಸ್‌ಗಳು 8:20, 21ರಲ್ಲಿ ದಾಖಲೆಯಾದ ದರ್ಶನದಲ್ಲಿ ಹೆಸರಿನಿಂದ ಕರೆಯಲ್ಪಟ್ಟಿವೆ.

ದಾನಿಯೇಲನು ನಾಲ್ಕನೆಯದರ ಹೆಸರನ್ನು ಹೇಳಿರುವುದಿಲ್ಲ, ಆದರೆ ಅವನು ಅದರ ಗುಣಲಕ್ಷಣಗಳನ್ನು ವಿವರಿಸಿದ್ದಾನೆ, ಅದು ಕಬ್ಬಿಣ ಮತ್ತು ಜೇಡಿಮಣ್ಣಿನ, ಬಲದ ಮತ್ತು ಬಲಹೀನತೆಯ ಮಿಶ್ರಣವಾಗಿದೆ ಎಂದು ಹೇಳಿದನು. ಪಾದಗಳು ಮತ್ತು ಕಾಲ್ಬೆರ ಳುಗಳು ಕಬ್ಬಿಣ ಮತ್ತು ಮಣ್ಣಿನಿಂದ ಮಾಡಲ್ಪಟ್ಟಿದ್ದವು ಆದರೆ ಕಬ್ಬಿಣ ಮತ್ತು ಮಣ್ಣು ಚಿನ್ನವಾದ ರಾಜ್ಯಗಳನ್ನು ಪ್ರತಿನಿಧೀಕರಿಸಲಿಲ್ಲ; ಮಿಶ್ರಣವು ಸಮ್ರಾಜ್ಯದ ವಿಭಜನೆಯನ್ನೂ ಒಗ್ಗಟ್ಟಿನ ಕೊರತೆಯನ್ನೂ ಸಾಂಕೇತಿಕವಾಗಿ ತೋರಿಸಿತು. ರಾಜ್ಯಕ್ಕೆ ಆಂತರಿಕ ಐಕ್ಯತೆಯಾಗಲೀ, ಸಾಮರಸ್ಯವಾಗಲೀ ಇರುವುದಿಲ್ಲ. ಪ್ರಶ್ನೆಯಿಲ್ಲದೇ, ಅದು ರೋಮನ್ ರಾಜ್ಯವಾಗಿತ್ತು. ಯಾಕಂದರೆ ಅದು ಮುಂದಿನ ಜಾಗತಿಕ ಸಾಮ್ರಾಜ್ಯದಂದೆ ಗ್ರೀಕ ರಾಜ್ಯವನ್ನು ಅನುಸರಿಸಿತು ಮತ್ತು ಮಿಶ್ರ ರೀತಿಯ ರಾಜ್ಯವಾಗಿತ್ತು. ಮೊದಲು ಕಬ್ಬಿಣ ದಂತೆ ಬಲವಾಗಿದ್ದು, ಇತರ ದೇಶಗಳ ಮೇಲೆ ಕರುಣೆಯಿಲ್ಲದೆ ಅವುಗಳನ್ನು ತುಳಿದು ಜಜ್ಜಿಹಾಕಿತು. ಆದರೆ, ಕ್ರಮೇಣವಾಗಿ ಆಂತರಿಕ ಅನೈಕ್ಯತೆಯು ಉಂಟಾಗಿ ದಂಗೆಗಳ ಲ್ಲಿಯೂ ಗೆದ್ದುಕೊಂಡ ದೇಶಗಳಲ್ಲಿ ಬಂಡಾಯಗಳಲ್ಲಿಯೂ ತುಂಬಿಕೊಂಡಿತು.

ಮಾನವ ಕೈಗಳ ಸಹಾಯವಿಲ್ಲದೇ ಪರ್ವತದೊಳಗಿಂದ ಕಡೆದು ಬಂದ ಗುಂಡು ಬಂಡೆಯು ಪ್ರತಿಮೆಗೆ ವಿರುದ್ಧವಾಗಿ ಬಂದು ಪಾದಗಳಿಗೆ ಅಪ್ಪಳಿಸಿತು. ಪ್ರತಿಮೆಯ ಪಾದಗಳು ನಾಲ್ಕನೆಯ ರಾಜ್ಯದ ಭಾಗವಾಗಿದ್ದುದರಿಂದ, ನಾಲ್ಕನೆಯ ರಾಜ್ಯದ ಅವಧಿಯಲ್ಲಿ ನಿತ್ಯರಾಜ್ಯವು ಅಸ್ಥಿತ್ವಕ್ಕೆ ಬಂದಿತು ಎಂದಾಗುತ್ತದೆ. ರೋಮನ್ ಸಾಮ್ರಾಜ್ಯವು ಜಗತ್ತನ್ನು ಆಳುತ್ತಿದ್ದ ಸಮಯದಲ್ಲಿ ಕ್ರಿಸ್ತನ ಸೇವೆ ಮತ್ತು ಸಭೆಯ ಸ್ಥಾಪನೆ ಆಯಿತು. ಕ್ರಿಸ್ತನ ಸೇವೆ ಮತ್ತು ಸಭೆಯ ಸ್ಥಾಪನೆಯ ಮೊದಲು ಅಲ್ಲ, ಆದರೆ ಅನಂತರ ಕ್ರಿ.ಶ. 476ರಲ್ಲಿ ರೋಮನ್ ಸಾಮ್ರಾಜ್ಯವು ನಾಶಪಡಿಸಲ್ಪಟ್ಟಿತು. ಆದುದರಿಂದ, ದಾನಿಯೇಲನ ಪ್ರವಾದನೆಯು, ದೇವರು ತನ್ನ ರಾಜ್ಯವನ್ನು ಸ್ಥಾಪಿಸುವದರ ಸಮಯದ ಬಗ್ಗೆ ನಿರ್ದಿಷ್ಟನಾಗಿದ್ದನು: ಆತನು ಅದನ್ನು ರೋಮನ್ ಸಾಮ್ರಾಜ್ಯದ ದಿನಗಳಲ್ಲಿ ಸ್ಥಾಪಿಸುವನು; ಮತ್ತು ರೋ ಮನ್ ಸಾಮ್ರಾಜ್ಯವು ಬಿದ್ದುಹೋಗಿ ದಾಟಿ ಹೋಗುವು ದಾದರೂ, ದೇವರ ರಾಜ್ಯವು ಎಂದೆಂದಿಗೂ ಮುಂದುವರಿಯುವುದು.

ನಾನು ಆರ್ಕಾನ್ಸಾಸದ ಸಿಯರ್ಸಿಯಲ್ಲಿ ವಾಸಿಸುವೆನು. ಹೆಚ್ಚಾದ ಪಟ್ಟಣಗಳಂತೆ ಅದರ ಅಳತೆ (ಜನಸಂಖ್ಯೆ: 18,000), ಅದಕ್ಕೆ ಉಪವಿಭಾಗಗಳಿರುವವು. ನಾವು ಸಿಯರ್ಸಿಯ ಕ್ಲೋವರ್‌ಡೇಲ್ ಉಪವಿಭಾಗದಲ್ಲಿ ವಾಸಿಸುತ್ತಿರುವೆವು ಎಂದು ನಾನು ಯಾರಿಗಾದರೂ ಹೇಳುವಾಗ, ಅವನು ನಾನು ಎಲ್ಲಿ ವಾಸಿಸುವೆನು ಎಂದು ತನ್ನ ಮನಸ್ಸಿನಲ್ಲಿ ತಿಳಿದುಕೊಳ್ಳುವನು. ನನ್ನ ಮನೆಯಿರುವ ಸಿಯರ್ಸಿಯಲ್ಲಿಯ ನಿರ್ದಿಷ್ಟ ವಾದ ಪ್ರದೇಶವನ್ನು ಅವನು ತಿಳಿದಿರುವನು.

ದೇವರ ರಾಜ್ಯವು ಸ್ಥಾಪಿಸಲ್ಪಡಬೇಕಾಗಿದ್ದ ವರ್ಷವನ್ನು ದಾನಿಯೇಲನು ನಮಗೆ ಕೊಡಲಿಲ್ಲ, ಆದರೆ ಸಮಯದ ಒಂದು ಅವಧಿಯನ್ನು - "ಈ ಅರಸರುಗಳ ದಿನಗಳಲ್ಲಿ" ನಮಗೆ ಕೊಟ್ಟನು, ಅದು ಅದನ್ನು ಸಂಕುಚಿತಗೊಳಿಸುತ್ತದೆ. ದೇವರ ರಾಜ್ಯದ ಸ್ಥಾಪನೆಗಾಗಿ ಯಾವ ಸಮಯದ ಆವರಣಚಿನ್ಹೆಯೊಳಗೆ ನೋಡಬೇಕೆಂಬುದನ್ನು ನಾವು ತಿಳಿದವರಾಗಿದ್ದೇವೆ.

## ಅದರ ಬೆಳವಣಿಗೆಯಲ್ಲಿ ಜಾಗತಿಕವಾದದ್ದು

ದಾನಿಯೇಲನ ಪ್ರವಾದನೆಯು ದೇವರ ರಾಜ್ಯದ ಆಶ್ಚರ್ಯಕರವಾದ ಬೆಳವಣಿಗೆಯನ್ನು ಸೂಚಿಸುತ್ತದೆ. "ಪ್ರತಿಮೆಗೆ ಬಡಿದ ಆ ಬಂಡೆಯು *ಮಹಾ ಪರ್ವತವಾಗಿ ಲೋಕದಲ್ಲೆಲ್ಲಾ ತುಂಬಿಕೊಂಡಿತು*" (ದಾನಿಯೇಲ 2:35; ಒತ್ತಿ ಹೇಳಿದ್ದು ನನ್ನದು) ಎಂದು ದಾನಿಯೇಲನು ಹೇಳಿದನು.

ರಾಜ್ಯಕ್ಕೆ ಸಣ್ಣದಾದ ಪ್ರಾರಂಭವಿರುವುದು, ಆದರೆ ಅದು ವಿಶ್ವದ ರಾಜ್ಯವಾಗಿ ಬೇಗನೇ ಬೆಳೆಯುವುದು. ಮಾನವ ಸಹಾಯದ ಸಹಾಯವಿಲ್ಲದೇ ಪರ್ವತದೊಳಗಿಂದ ಕಡಿಯಲ್ಪಟ್ಟ ಚಿಕ್ಕ ಬಂಡೆಗಲ್ಲು ಜಗತ್ತಿನ ಮೇಲೆ ಪರಿಣಾಮ ಮಾಡುವ ಬಲವಾದ ಪರ್ವತವಾಗಿ ಬೆಳೆಯುವುದು.

ತನ್ನ ಸಾಮ್ಯಗಳಲ್ಲಿ ಒಂದರಲ್ಲಿ, ಯೇಸುವು ಪರಲೋಕ ರಾಜ್ಯದ ಬೆಳವಣಿಗೆಯನ್ನು ಸಾಸಿವೆ ಕಾಳಿನ ಬೆಳವಣಿಗೆಗೆ ಹೋಲಿಸಿದನು. "ಅದು ಎಲ್ಲಾ ಬೀಜಗಳಿಗಿಂತಲೂ ಸಣ್ಣದಾಗಿದೆ, ಬೆಳೆದ ಮೇಲೆ ಕಾಯಿಪಲ್ಯದ ಗಿಡಗಳಿಗಿಂತ ದೊಡ್ಡದಾಗಿ ಮರವಾಗುತ್ತದೆ; ಆಕಾಶದಲ್ಲಿ ಹಾರಾಡುವ ಪಕ್ಷಿಗಳು ಬಂದು ಅದರ ಕೊಂಬೆಗಳಲ್ಲಿ ವಾಸಮಾಡುತ್ತವೆ" (ಮತ್ತಾಯ 13:32) ಎಂದು ಆತನು ಹೇಳಿದನು.

ದೇವರ ರಾಜ್ಯವು ಜಗತ್ತಿನ ದೃಶ್ಯದಲ್ಲಿ ತಕ್ಷಣವೇ, ಅತೀ ವಿಶಾಲವಾದ, ಜಾಗತಿಕ ಮಟ್ಟದಲ್ಲಿ ಬಲಿಷ್ಠವಾಗಿ ಬೆಳೆಯುವುದು ಎಂದು ದಾನಿಯೇಲನು ಪ್ರವಾದನೆ ಹೇಳಲಿಲ್ಲ. ಇಲ್ಲವೇ ಯೇಸುವು ಪ್ರಸಂಗಿಸಲಿಲ್ಲ. ಹೀಗಿದ್ದರೂ, ದಾನಿಯೇಲನು ಮತ್ತು ಯೇಸುವು, ಸಮಯದಲ್ಲಿ, ಈ ರಾಜ್ಯವು ನಂಬಲಸಾಧ್ಯವಾದ ಪ್ರಭಾವದಲ್ಲಿ ಬೆಳೆಯುವುದು ಎಂದು ಮುಂತಿಳಿಸಿದರು. ಅದು ಚಿಕ್ಕದಾಗಿ ಪ್ರಾರಂಭವಾಗುವುದು ಮತ್ತು ಅದಕ್ಕೆ ವಿಶ್ವದ ಆಯಾಮಗಳಿರುವಂತೆ ವಿಶಾಲವಾಗಿ ಬೆಳೆಯುವುದು, ದೇವರ ರಾಜ್ಯವು ದೊಡ್ಡದಾಗಿ ಪ್ರಾರಂಭವಾಗಿ, ಇಲ್ಲವಾಗಿ ಹೋಗುವದಿಲ್ಲ, ಆದರೆ ಅದು ಚಿಕ್ಕದಾಗಿ ಹುಟ್ಟಿ ಮೇಲಕ್ಕೂ ಹೊರಗೂ ಭೂಲೋಕದಲ್ಲೆಲ್ಲಾ ವಿಸ್ತರಿಸುವುದು.

ಸ್ಯಾಮ್ ವಾಲ್‌ಟನ್‌ನು ತನ್ನ ಮಲ್ಟಿಬಿಲಿಯನ್ ಡಾಲರ ವಾಲ್‌ಮಾರ್ಟ ಸ್ಟೋರುಗಳನ್ನು ಆರ್ಕಾನ್ಸಸ್‌ದ ಬೆಂಟೊನ್‌ವಿಲಿಯಲ್ಲಿ ಐದು - ಮತ್ತು - ಹತ್ತು ಸೆಂಟುಗಳ ಚಿಕ್ಕ ಅಂಗಡಿಯಾಗಿ ಪ್ರಾರಂಭಿಸಿದನು. ತನ್ನ ಮೊದಲನೆಯ ಅಂಗಡಿಯನ್ನು ಪ್ರಾರಂಭಿಸುವದಕ್ಕಾಗಿ ಹಣವನ್ನು ಸಾಲ ತೆಗೆದುಕೊಳ್ಳುವ ಅವಶ್ಯಕತೆ ಅವನಿಗಿತ್ತು. ಅದು ಒಂದು ಚಿಕ್ಕ ಪ್ರಾರಂಭವಾಗಿತ್ತು, ಆದರೆ ಅವನ ವ್ಯಾಪಾರವು ಸಣ್ಣವಾಗಿಯೇ ಉಳಿಯಲಿಲ್ಲ. ಈಗ ಈ ಕಂಪನಿಯು ನಾಲ್ಕು ಮತ್ತು ಐದು ನೂರು ಸಾವಿರ ಮಧ್ಯದ ಸಂಖ್ಯೆಯಲ್ಲಿ ಕೆಲಸದವರನ್ನು ನೇಮಿಸಿಕೊಳ್ಳುತ್ತದೆ, ತನ್ನ ಮರಣಕ್ಕಿಂತ ಮೊದಲು ಸ್ಯಾಮ್ ವಾಲ್‌ಟನ್‌ನು ಜಗತ್ತಿನಲ್ಲಿ ಅತೀ ಐಶ್ವರ್ಯವಂತರಾದವರಲ್ಲಿ ಒಬ್ಬನಾಗಿದ್ದನು, ಹೀಗಿದ್ದರೂ ಅವನ ವ್ಯವಹಾರ ಸಾಮ್ರಾಜ್ಯದ ಗಣನೀಯ ಬೆಳವಣಿಗೆಯು, ದೇವರ ರಾಜ್ಯದ ಬೆಳವಣಿಗೆ - ವಿಸ್ತರಣೆಯ ಶತಭಾಗದ ಚಿಕ್ಕ ಅಂಶದಷ್ಟಾದರೂ ಆಗಿರದು. (ನೋಡಿರಿ ಪ್ರಕಟನೆ 7.) ದಾನಿಯೇಲನ ಪ್ರಕಾರವಾಗಿ, ದೇವರ ರಾಜ್ಯವು ಒಂದು ಚಿಕ್ಕ

ಕಲ್ಲಿನಿಂದ ಒಂದು ಪರ್ವತವಾಗಿ, ಒಂದು ಘಟನೆಯಿಂದ ಬಲವಾದ ಚಳವಳದ ವರೆಗೆ ಬೆಳೆಯುವುದು.

## ಅದರ ಸ್ವಭಾವದಲ್ಲಿ ನಿತ್ಯವಾದದ್ದಾಗಿರುವುದು

ದಾನಿಯೇಲನ ಪ್ರವಾದನೆಯು ಬರಲಿಕ್ಕಿದ್ದ ರಾಜ್ಯದ ದೈವಿಕ ಬಲವನ್ನೂ ನಿತ್ಯವಾದ ಸ್ವಭಾವವನ್ನೂ ಒತ್ತಿ ಹೇಳುತ್ತದೆ. "ಅದರ ಪ್ರಾಬಲ್ಯವು ಬೇರೆ ಜನಾಂಗಕ್ಕೆ ಕದಲಿ ಹೋಗದು, ಆ ರಾಜ್ಯಗಳನ್ನೆಲ್ಲಾ ಭಂಗಪಡಿಸಿ ನಿರ್ನಾಮಮಾಡಿ ಶಾಶ್ವತವಾಗಿ ನಿಲ್ಲುವದು" (ದಾನಿಯೇಲ 2:44) ಎಂದು ಹೇಳಿದನು. ರಾಜ್ಯಕ್ಕೆ ಎಲ್ಲಾ ಇತರ ರಾಜ್ಯಗಳಿಂದ ಉಳಿದುಕೊಂಡು ಇರುವಂಥ ಬಲವು ಇರುವುದು.

ಆತ್ಮಿಕ ಹಸ್ತದಿಂದ ಪರ್ವತದೊಳಗಿಂದ ಬಡೆದು ಬಂದ ಚಿಕ್ಕ ಕಲ್ಲು ಮೂರ್ತಿಯ ಪಾದಗಳಿಗೆ ಅಪ್ಪಳಿಸಿತು ಎಂದು ದಾನಿಯೇಲನು ಹೇಳಿದನು. ಪ್ರತಿಮೆಯು ನಾಶಪಡಿಸಲ್ಪಟ್ಟಿತು; ಅದರ ಬಂಗಾರ, ಬೆಳ್ಳಿ, ತಾಮ್ರ, ಕಬ್ಬಿಣ ಮತ್ತು ಮಣ್ಣು ಗೋದಿ ಹೊಟ್ಟಿನಂತಾದವು ಮತ್ತು ಗಾಳಿಯಿಂದ ತೂರಿಕೊಂಡು ಹೋಗಲ್ಪಟ್ಟವು.

ಪುರಾತನ ಪೂರ್ವದೇಶದಲ್ಲಿ ಧಾನ್ಯಗಳನ್ನು ಕಣಮಾಡುವುದಕ್ಕೆ ದೃಶ್ಯವು ಸರಿಯಾಗಿತ್ತು, ತುಳಿಯಲ್ಪಟ್ಟ ಕಾಳು ಸಾಯಂಕಾಲದ ಬೀಸುಗಾಳಿಯಿಂದ ಹೊಟ್ಟು ಹಾರಿಹೋಗುವಂತೆ ತೂರಲ್ಪಡುತ್ತಿತ್ತು. ದೇವರ ರಾಜ್ಯಕ್ಕೆ ಹೋಲಿಸಲ್ಪಟ್ಟು, ಕನಸಿನಲ್ಲಿ ಕಂಡ ನಾಲ್ಕು ರಾಜ್ಯಗಳು ಕಾಳಿನ ಹೊಟ್ಟಿನಂತೆ ಬೆಲೆಯಿಲ್ಲದವುಗಳಾಗಿ ಕಾಣಲ್ಪಟ್ಟಿವೆ.

ಜನರ ಇತರ ಎಲ್ಲಾ ರಾಜ್ಯಗಳಿಗಿಂತ - ಹಿಂದಿನ, ಇಂದಿನ ಮತ್ತು ಮುಂದಿನ - ದೇವರ ರಾಜ್ಯವು ಹೆಚ್ಚು ಬಲಶಾಲಿಯಾದದ್ದಾಗಿದೆ. ಅದು ಎಂದೂ ಮಾನವ ರಾಜ್ಯದಿಂದ ಇಲ್ಲವೇ ಜಗತ್ತಿನ ಒಂದುಗೂಡಿದ ರಾಜ್ಯಗಳಿಂದ ಜಯಿಸಲ್ಪಡುವದಿಲ್ಲ; ದಾನಿಯೇಲ 2:44ರ ಪ್ರಕಾರ ಅದು ಎಂದೂ "ಇನ್ನೊಂದು ಜನಾಂಗಕ್ಕೆ ಬಿಟ್ಟು ಕೊಡಲ್ಪಡುವುದಿಲ್ಲ."

---

*ದೇವರ ರಾಜ್ಯದ ಭಾಗವಾಗಿರುವುದು,*
*ಸೋಲಲರಿಯದ ಸೈನ್ಯದಲ್ಲಿ ಇರುವಂತೆ ಇರುತ್ತದೆ.*

---

"ಆ ರಾಜ್ಯರ ಕಾಲದಲ್ಲಿ ಪರಲೋಕದ ದೇವರು ಒಂದು ರಾಜ್ಯವನ್ನು ಸ್ಥಾಪಿಸುವನು; ಅದು ಎಂದಿಗೂ ಅಳಿಯದು, ಅದರ ಪ್ರಾಭಲ್ಯವು ಬೇರೆ ಜನಾಂಗಕ್ಕೆ ಕದಲಿ ಹೋಗದು, ಆ ರಾಜ್ಯಗಳನ್ನೆಲ್ಲಾ ಭಂಗಪಡಿಸಿ ನಿರ್ನಾಮಮಾಡಿ ಶಾಶ್ವತವಾಗಿ ನಿಲ್ಲುವದು" (ದಾನಿಯೇಲ 2:44) ಎಂದು ದಾನಿಯೇಲನು ಹೇಳಿದನು. ದಾನಿಯೇಲನು ಉಪಯೋಗಿಸಿದ ಮೂರು ವ್ಯಕ್ತಪಡಿಸುವಿಕೆಗಳು ನಿತ್ಯವಾದ ಸ್ವಭಾವವನ್ನು ಸೂಚಿಸುತ್ತವೆ: "ಎಂದಿಗೂ ಅಳಿಯದು," "ಬೇರೆ ಜನಾಂಗಕ್ಕೆ ಕದಲಿ ಹೋಗದು" ಮತ್ತು "ಶಾಶ್ವತವಾಗಿ ನಿಲ್ಲುವುದು." ಒಮ್ಮೆ ಸ್ಥಾಪಿಸಲ್ಪಟ್ಟ, ಈ ರಾಜ್ಯವು ಎಂದೆಂದಿಗೂ ಇರುವುದು.

ಅಂತರಾಳದಲ್ಲಿ, ನಾವೆಲ್ಲರೂ ಹೀಗೆ ಕೇಳುವೆವು, "ನಾಳೆಯ ದಿನವು ಏನನ್ನು ತರುವುದು?"; "ನಮ್ಮ ಭವಿಷ್ಯದ ಜಗತ್ತು ಹೇಗಿರುವುದು?"; "ಇಂದಿನಿಂದ ಹತ್ತು ಸಾವಿರ ವರ್ಷಗಳ ನಂತರ ನಾನು ಎಲ್ಲಿರುವೆನು?" ದಾನಿಯೇಲನ ಪುಸ್ತಕವು ಎಂದೆಂದಿಗೂ ನಾಶಪಡಿಸಲ್ಪಡದ ರಾಜ್ಯದ ಭಾಗವಾಗಿರುವೆವು ಎಂಬ ಬಲವಾದ ಸುದ್ಧಿಯನ್ನು ತರುವುದು.

ದೇವರ ರಾಜ್ಯದ ಭಾಗವಾಗಿರುವುದು ಸೋಲಲರಿಯದ ಸೈನ್ಯದಲ್ಲಿ ಇರುವಂತೆ ಇರುತ್ತದೆ. ಎದುರಿಸಬೇಕಾದ ವೈರಿ ಸಂಖ್ಯೆ ಇಲ್ಲವೇ ಬಲದ ಬಗ್ಗೆ ಗಮನವಿರುವುದಿಲ್ಲ. ದೇವರ ರಾಜ್ಯದ ಪ್ರಜೆಗಳ ಮನಸ್ಸುಗಳಲ್ಲಿ ಸೋಲಿನ ವಿಚಾರವು ಇರಲೇ ಬಾರದು; ನೋಡದ ನಾಳೆಯಾಗಲೀ ಇಲ್ಲವೇ ತಿಳಿಯದ ವೈರಿಯಾಗಲೀ ಎಂದೂ ನಮ್ಮನ್ನು ಭಯಪಡಿಸಬಾರದು.

ಒಬ್ಬ ಪ್ರಸಿದ್ಧ ಬೇಟೆಗಾರನು ತನ್ನ ಜಯದ ಚಿನ್ಹೆಗಳ ಕೋಣೆಯನ್ನು ತನ್ನ ಸ್ನೇಹಿತನಿಗೆ ತೋರಿಸಿದ್ದರ ಬಗ್ಗೆ ಕಥೆಯು ಹೇಳಲ್ಪಡುತ್ತದೆ. ಜಗತ್ತಿನಲೆಲ್ಲಾ ಬೇಠೆ ಮಾಡುವಾಗ ತೆಗೆದುಕೊಂಡ ಕಾಡು ಪ್ರಾಣಿಗಳ ತಲೆಗಳು ಗೋಡೆಗಳ ಮೇಲೆ ಸಾಲಾಗಿ ಇಡಲ್ಪಟ್ಟಿದ್ದವು. ಆಗ, ಸ್ನೇಹಿತನು ಬಹಳ ಸ್ಪಷ್ಟವಾಗಿ ಕಾಣಿಸುವ ಪ್ರತಿಯೊಂದು ಸ್ಥಳದಲ್ಲಿ ಗೋಡೆಯ ಮಧ್ಯದಲ್ಲಿ, ಕಟ್ಟುಹಾಕಿದ ಸಿಂಹದ ಬಾಲವು ನೇತು ಹಾಕಲ್ಪಟ್ಟಿದ್ದನ್ನು ಗಮನಿಸಿದನು. "ಸಿಂಹದ ಬಾಲವನ್ನು ಯಾಕೆ ಕಟ್ಟುಹಾಕಿಸಿರುವಿರಿ?" ಎಂದು ಸ್ನೇಹಿತನು ಕೇಳಿದನು. "ಸಿಂಹದ ತಲೆ ಹೆಚ್ಚು ಉತ್ತಮವಾದ ಪ್ರದರ್ಶನವಾಗಿರುತ್ತಿತ್ತು" ಎಂದು ಕೂಡಿಸಿದನು, ಈ ಪ್ರಸಿದ್ಧ ಬೇಟೆಗಾರನು ಮೌನವಾಗಿ ಒಪ್ಪಿಕೊಂಡನು. "ನಾನು ಸಿಂಹವನ್ನು ಕೊಂಡುಕೊಂಡಾಗ, ಯಾರೋ ಒಬ್ಬರು ಅದರ ತಲೆಯನ್ನು ಕಡಿದುಕೊಂಡು ಹೋಗಿರುತ್ತಿದ್ದರು" ಎಂದು ಹೇಳಿದನು. ಸಿಂಹದ ತಲೆಯನ್ನು ಯಾರೋ ಒಬ್ಬರು ಕಡಿದುಕೊಂಡು ಹೋಗಿದ್ದರೆ ಅದರ ಬಾಲವನ್ನು ಕತ್ತರಿಸುವುದು ಸುಲಭವಾಗಿರುತ್ತದೆ!

ಅದೇ ರೀತಿಯಲ್ಲಿ, ಜಯವು ಆಗಲೇ ಗೆಲ್ಲಲ್ಪಟ್ಟಿರುವದು ಎಂಬುದನ್ನು ನಾವು ತಿಳಿದರೆ ಜಯದ ಜೀವಿತ ಜೀವಿಸುವುದು ಸುಲಭವಾಗುತ್ತದೆ. ಪರಲೋಕ ರಾಜ್ಯವು ಸೋಲನ್ನು ಎಂದೂ ಅನುಭವಿಸುವುದಿಲ್ಲ. ರಾಜ್ಯದ ಸ್ಥಾಪನೆಯ ಮೊದಲು ಪ್ರವಾದನೆಯು ಅದರ ಬಲವನ್ನೂ ಮತ್ತು ಜಗತ್ತಿನ ಮೇಲಿನ ಸಂಪೂರ್ಣ ಜಯವನ್ನೂ ಮುಂತಿಳಿಸಿತು, ಆದುದರಿಂದ, ಕ್ರೈಸ್ತರು *ಜಯದ ಕಡೆಗಲ್ಲ,* ಆದರೆ *ಜಯದಿಂದ* ಕಾರ್ಯಮಾಡುತ್ತಾರೆ. ಅವನು ಭರವಸೆಯಿಂದ ಜೀವಿಸುತ್ತಾನೆ ಯಾಕಂದರೆ ಸೋಲಿನ ದೊಡ್ಡ ಸಿಂಹದ ತಲೆಯು ಆಗಲೇ ಕಡಿದು ಹಾಕಲ್ಪಟ್ಟಿರುವದನ್ನು ತಿಳಿದಿರುವನು. ಪುಸ್ತಕದ ಕೊನೆಯ ಪುಟವನ್ನು ನಾವು ಓದಿದ್ದೇವೆ. ದೇವರ ಮಕ್ಕಳಿಗಾಗಿ, ಮಾನವ ಚರಿತ್ರೆಯ ಕಥೆಯು, ವಿಮೋಚಿತರ ನಿತ್ಯವಾದ ಆಚರಣೆಯಲ್ಲಿ ದೇವರ ಸಿಂಹಾಸನದ ಸುತ್ತಲೂ ಅಂತ್ಯಗೊಳ್ಳುವುದು.

## ಮುಕ್ತಾಯ

ಹೊಸ ಒಡಂಬಡಿಕೆಯಲ್ಲಿ ದಾನಿಯೇಲನ ಪ್ರವಾದನೆಯು ನೆರವೇರುವದನ್ನು ನಾವು ನೋಡುತ್ತೇವೆಯೋ? ಉತ್ತರಕ್ಕಾಗಿ ಅಪೊಸ್ತಲರ ಕೃತ್ಯಗಳು 2ನ್ನು ನೋಡೋಣ.

*ಬರಲಿಕ್ಕಿದ್ದ ರಾಜ್ಯ ಕರ್ತನಿಂದ ಸ್ಥಾಪಿಸಲ್ಪಡುವುದು ಎಂದು ದಾನಿಯೇಲನು ಹೇಳಿದನು, ಹೀಗೆ ಅದು ದೈವಿಕ ಮೂಲದ್ದಾಗಿರುವುದು.* ಅಪೊಸ್ತಲರ ಕೃತ್ಯಗಳು 2ರಲ್ಲಿ ಪರಿಶುದ್ಧಾತ್ಮನು ಅಪೊಸ್ತಲರ ಮೇಲೆ ಅದ್ಭುತಕರವಾಗಿ ಸುರಿಸಲ್ಪಟ್ಟನು ಮತ್ತು ಸುವಾರ್ತೆಯ ಯುಗವು ಸಭೆಯ ಪ್ರಾರಂಭದೊಂದಿಗೆ ದೈವಿಕವಾಗಿ ಉದಯವಾಯಿತು. ಯೇಸುವು ತನ್ನ ಸೇವೆಯ ಕಾಲದಲ್ಲಿ, ಅಪೊಸ್ತಲರ ಮೇಲೆ ಪರಿಶುದ್ಧಾತ್ಮನ ಅದ್ಭುತಕರವಾದ ಕೊಡುವಿಕೆಯ ಬಲದಿಂದ ರಾಜ್ಯವು ಬರುವುದೆಂದು ಸೂಚಿಸಿದ್ದನು (ಮಾರ್ಕ 9:1; ಲೂಕ 24:46-49).

*ಬರಲಿಕ್ಕಿದ್ದ ರಾಜ್ಯವು ರೋಮನ್ ಸಾಮ್ರಾಜ್ಯದ ದಿನಗಳಲ್ಲಿ ಸ್ಥಾಪಿಸಲ್ಪಡುವುದೆಂದು ಪ್ರವಾದನೆಯು ಸೂಚಿಸುತ್ತದೆ.* ಅಪೊಸ್ತಲರ ಕೃತ್ಯಗಳು 2, ಆ ಸಮಯಕ್ಕೆ ಸ್ಪಷ್ಟವಾಗಿ

ಹೊಂದಿಕೊಳ್ಳುತ್ತದೆ, ಯಾಕಂದರೆ ರೋಮ್ ಸಾಮ್ರಾಜ್ಯವು, ಅಪೊಸ್ತಲರ 2ರ ಘಟನೆಗಳು ಸಂಭವಿಸುವ ಸಮಯದಲ್ಲಿ ಆಳಿಕೆ ಮಾಡುತ್ತಿತ್ತು.

*ದಾನಿಯೇಲನ ಪ್ರಕಾರವಾಗಿ, ಬರಲಿಕ್ಕಿದ್ದ ರಾಜ್ಯವು ಸಣ್ಣದಾಗಿ ಪ್ರಾರಂಭಗೊಂಡು ಜಾಗತಿಕ ಬಲವಾಗಿ ಬೆಳೆಯುವುದು.* ಅಪೊಸ್ತಲರ ಕೃತ್ಯಗಳು 2ರಲ್ಲಿ ಸಭೆಯು ಮೂರು ಸಾವಿರ ಜನರೊಂದಿಗೆ ಪ್ರಾರಂಭವಾಯಿತು ಮತ್ತು ಬೇಗನೇ ಜಗತ್ತಿನ ಮೇಲೆ ಪರಿಣಾಮ ಮಾಡುವಂತೆ ಬೆಳೆಯಿತು.

*ಬರಲಿಕ್ಕಿದ್ದ ರಾಜ್ಯವು ಜಗತ್ತಿನ ರಾಜ್ಯಗಳಿಗಿಂತ ಹೆಚ್ಚು ಬಲವಾಗಿರುವುದೆಂದು ದಾನಿಯೇಲನು ಹೇಳಿದನು,* ತನ್ನ ಸಭೆಯ ಸ್ಥಾಪನೆಯ ಬಗ್ಗೆ ಯೇಸುವು, "ಪಾತಾಳ ಲೋಕದ ಬಲವು ಅದನ್ನು ಸೋಲಿಸಲಾರದು" (ಮತ್ತಾಯ 16:18) ಎಂದು ಹೇಳಿದನು.

*ಬರಲಿಕ್ಕಿದ್ದ ರಾಜ್ಯವು ಎಂದೆಂದಿಗೂ ಇರುವುದೆಂದು ದಾನಿಯೇಲನಿಗೆ ಕರ್ತನು ಪ್ರಕಟಿಸಿದನು.* ಅಪೊಸ್ತಲರ ಕೃತ್ಯಗಳು 2ರಲ್ಲಿ ಸಭೆಯು ಸ್ಥಾಪಿಸಲ್ಪಟ್ಟನಂತರ, ಹೊಸ ಒಡಂಬಡಿಕೆಯ ಉಳಿದ ಭಾಗವು ಅದರ ಬೆಳವಣಿಗೆಯನ್ನು ಮತ್ತು ಸಹನೆಯ ಜೀವನವನ್ನು ಹೇಳುತ್ತದೆ.

ಅಪೊಸ್ತಲರ ಕೃತ್ಯಗಳು 2ರಲ್ಲಿ ಸಭೆಯ ಸ್ಥಾಪನೆಯೊಂದಿಗೆ ದಾನಿಯೇಲನ ಪ್ರವಾದನೆಯು ನೆರವೇರಿತು ಎಂಬುದರ ಬಗ್ಗೆ ಯಾವುದೇ ಸಂಶಯವಿರುವುದೋ? ಸಭೆಯು ದೇವರು ಸ್ಥಾಪಿಸಿದ ನಿತ್ಯ ರಾಜ್ಯವಾಗಿದೆ.

ಕ್ರಿಸ್ತನ ಸಭೆಯ, ನಿತ್ಯವಾದ ರಾಜ್ಯದ ಸದಸ್ಯನಾಗಿರುವದರ ಲಾಭಗಳು ಸ್ಪಷ್ಟ ವಾಗಿವೆ. ದೇವರ ರಾಜ್ಯದ ಪ್ರಜೆಗಳು ಜಗತ್ತಿನಲ್ಲಿ ದೇವರು ಮಾಡುತ್ತಿರುವದರ ಭಾಗವಾ ಗಿದ್ದಾರೆ. ಈ ಪ್ರಜೆಗಳು ಜಯದಲ್ಲಿ ಜೀವಿಸುವರು, ಯಾಕಂದರೆ ದೇವರ ರಾಜ್ಯವು ಜನರ ರಾಜ್ಯಗಳಿಗಿಂತ ಹೆಚ್ಚು ಬಲವಾದದ್ದೂ ಮತ್ತು ಮರಣಕ್ಕಿಂತಲೂ ಸಹ ಹೆಚ್ಚು ಬಲವಾ ದದ್ದೂ ಆಗಿದೆ. ಈ ಪ್ರವಾದಿಸಲ್ಪಟ್ಟ ರಾಜ್ಯದ ಪ್ರಜೆಗಳಿಗೆ ದೇವರೊಂದಿಗೆ ನಿತ್ಯವಾದ ಭವಿಷ್ಯವಿದೆ. ಅವರು ಜೀವಿಸುವಂತೆ, ಅವರು ಭರವಸೆಯುಳ್ಳವರೂ, ಸ್ಥಿರತೆಯುಳ್ಳ ವರೂ ಹಾಗೂ ಸಮಯವು ದಾಟಿ ಹೋಗುವುದರೊಂದಿಗೆ ಬಾಡಿಹೋಗದ ಇಲ್ಲವೇ ನಶಿಸಿ ಹೋಗದ ಜೀವನದ - ಕೃತ್ಯಗಳಲ್ಲಿ ತೊಡಗಿರುವವರೂ ಆಗಿರುವರು.

ನಿತ್ಯ ರಾಜ್ಯದಲ್ಲಿ ಇರುವದರ ಮೌಲ್ಯವನ್ನು ಸಮಾನ ಗುಂಪುಗಳ ಪಂದ್ಯಾಟಗ ಳನ್ನು ನೋಡುವದರಿಂದ ಕಲಿತುಕೊಳ್ಳಬಹುದು. ಆಟವು ಪ್ರಗತಿ ಹೊಂದಿದಂತೆ, ನಾವು ಪ್ರೋತ್ಸಾಹಿಸುತ್ತಿರುವ ಗುಂಪು ಗೆಲ್ಲುವುದೆಂದು ಹೇಳಲಾರದವರಾಗಿರುವಾಗ ಭಯಪಡುವವರಾಗುತ್ತೇವೆ. ಆಟವು ಹೇಗೆ ಮುಕ್ತಾಯಗೊಳ್ಳುವದೆಂಬುದನ್ನು ನಾವು ತಿಳಿಯದೇ ಇರುವದರಿಂದ ಇಡೀ ಆಟದ ಸಮಯದಲ್ಲಿ ನಮ್ಮ ಆಸನಗಳ ಅಂಚಿನಲ್ಲಿ ಕುಳಿತುಕೊಂಡಿರುತ್ತೇವೆ. "ಅದು ಆಟವನ್ನು ಅಷ್ಟು ಕುತೂಹಲಕಾರಿಯಾದುದ್ದನ್ನಾಗಿ ಮಾಡುತ್ತದೆ. ಅದು ಹೇಗೆ ತಿರುಗುವುದು ಎಂಬುದನ್ನು ತಿಳಿಯದೇ ತನ್ನ ಜೀವನದ ಪ್ರಕಾರ ಅವನು ಹೋಗಬೇಕಾಗಿದ್ದರೆ ನೀವು ತಿಳಿಯಲಾರಿರಿ" ಎಂದು ನೀವು ಹೇಳ ಬಹುದು. ಅದು ಒಂದು ಆಟದ ಬಗ್ಗೆ ಸತ್ಯವಾಗಿರುತ್ತದೆ, ಆದರೆ ಅದು ಜೀವನದ ಬಗ್ಗೆ ಸತ್ಯವಾಗಿರುವುದಿಲ್ಲ. ತನ್ನ ಜೀವಿತವು ಹೇಗೆ ತಿರುಗುವುದು ಎಂಬುದನ್ನು ತಿಳಿಯದ ವ್ಯಕ್ತಿಯ ಬಗ್ಗೆ ಕನಿಕರ ಪಡಬೇಕು. ತಾನು ಗೆಲ್ಲುವ ಟೀಮಿನಲ್ಲಿ ಇರುವೆನೋ ಅಥವಾ, ಇರುವುದಿಲ್ಲವೋ ಎಂಬುದನ್ನು ಸುವಾರ್ತೆಯನ್ನು ಹೊರತು ಪಡಿಸಿ ಬೇರೆ ಯಾವುದೂ ತೆಗೆದು ಹಾಕಲ್ಪಡಲಾರದ ಆಳವಾದ ದುಃಖವು ಅವನಿಗಿರುವುದು. ಕ್ರೈಸ್ತನು ತನ್ನ ಜೀವಿತವು ಹೇಗೆ ಅಂತ್ಯಗೊಳ್ಳವುದು ಎಂಬುದನ್ನು ತಿಳಿದಿರುವನು: ನಿತ್ಯರಾಜ್ಯದಲ್ಲಿ ಒಬ್ಬನಾಗಿ ಅವನು ಪರಲೋಕದಲ್ಲಿ ದೇವರೊಂದಿಗೆ ಎಂದೆಂದಿಗೂ ಜೀವಿಸುವನು.

ಇದರ ಬೆಳಕಿನಲ್ಲಿ, ನಾವು ದೇವರ ನಿತ್ಯರಾಜ್ಯದ ಭಾಗವಾಗಿ ನಾವು ಏನನ್ನಾದರೂ ಕಳೆದುಕೊಂಡರೆ ಅದು ಯಾವ ಭಿನ್ನತೆಯನ್ನೂ ಮಾಡುವುದಿಲ್ಲ; ಮತ್ತು ದೇವರ ನಿತ್ಯ ರಾಜ್ಯದ ಭಾಗವಾಗಿರದೇ ನಾವು ಏನನ್ನಾದರೂ ಹೊಂದಿಕೊಂಡರೆ ಅದು ಯಾವ ಭಿನ್ನತೆಯನ್ನು ಮಾಡುವುದಿಲ್ಲ, ಪ್ರಾಪಂಚಿಕವಾದದ್ದು ನಿತ್ಯವಾದದ್ದಾಗುವುದು, ಮತ್ತು ಮರ್ತ್ಯರು ದೇವರ ನಿತ್ಯರಾಜ್ಯವನ್ನು ಪ್ರವೇಶಿಸುವಾಗ ಅಮರತ್ವವನ್ನು ತೆಗೆದು ಕೊಳ್ಳು ವರು. "ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ; ನನ್ನನ್ನು ನಂಬುವವನು ಸತ್ತರೂ ಬದುಕುವನು" (ಯೋಹಾನ 11:25) ಎಂದು ಯೇಸು ಹೇಳಿದನು. ದೇವರ ರಾಜ್ಯದಲ್ಲಿ ದೈವಿಕ ಮರಣವೂ ನಮಗೆ ತೊಂದರೆ ಕೊಡಲಾರದು. "ನನಗಂತೂ ಬದುಕುವದೆಂದರೆ ಕ್ರಿಸ್ತನೇ, ಸಾಯುವುದು ಲಾಭವೇ" (ಫಿಲಿಪ್ಪಿ 1:21) ಎಂದು ಪೌಲನು ಬರೆದನು. ಮರಣವು ಕ್ರೈಸ್ತನಿಗೆ ಲಾಭಕೊಡುವ ಸೂಚನೆಯಾಗಿದೆ. ದೇವಭಕ್ತನಿಗೆ, ಮರಣವು ನೋವಾಗಿರುವುದಿಲ್ಲ, ಆದರೆ ಲಾಭವಾಗಿದೆ - ಒಂದು ಆಶೀರ್ವಾದ, ಆದರೆ ಶಾಪವಲ್ಲ.

ನೀವು ಈ ಲೋಕಕ್ಕಾಗಿ ಮಾತ್ರವೇ ಜೀವಿಸಿದರೆ ನೀವು ಈ ಲೋಕವನ್ನು ಮತ್ತು ಬರಲಿಕ್ಕಿದ್ದ ಲೋಕವನ್ನು ಎರಡನ್ನೂ ಕಳೆದು ಕೊಳ್ಳುವಿರಿ. ಬರಲಿಕ್ಕಿದ್ದ ಲೋಕಕ್ಕಾಗಿ ಮಾತ್ರವೇ ನೀವು ಜೀವಿಸುತ್ತಿದ್ದರೆ, ನೀವು ಈ ಲೋಕವನ್ನು ಮತ್ತು ಬರಲಿಕ್ಕಿದ್ದ ಲೋಕವನ್ನು - ಎರಡನ್ನೂ ಸಂಪಾದಿಸಿಕೊಳ್ಳುವಿರಿ.

---

## ಅಧ್ಯಯನಕ್ಕಾಗಿ ಮತ್ತು ಚರ್ಚೆಗಾಗಿ ಪ್ರಶ್ನೆಗಳು

1. ನೆಬೂಕದ್ನೆಚ್ಚರನ ಪಂಡಿತರು ಅರಸನ ಕನಸನ್ನು ಯಾಕೆ ಅರ್ಥಮಾಡಿ ಹೇಳಲಿಲ್ಲ?
2. ಕನಸಿನ ಅರ್ಥವನ್ನು ದೇವರು ತನಗೆ ಕೊಟ್ಟಾಗ ದಾನಿಯೇಲನು ಏನು ಮಾಡು ತ್ತಿದ್ದನು.
3. ನೆಬೂಕದ್ನೆಚ್ಚರನು ತನ್ನ ಕನಸಿನಲ್ಲಿ ಕಂಡ ಪ್ರತಿಮೆಯನ್ನು ವಿವರಿಸಿರಿ.
4. ಪ್ರತಿಮೆಯ ಪ್ರತಿಯೊಂದು ಭಾಗಕ್ಕೆ ಯಾವ ವ್ಯಾಖ್ಯಾನವನ್ನು ದಾನಿಯೇಲನು ಕೊಟ್ಟನು?
5. ಚರಿತ್ರೆಯ ಯಾವ ಭಾಗವನ್ನು ಈ ಕನಸು ಒಳಗೊಂಡಿರುತ್ತದೆ?
6. ಈ ನಿತ್ಯವಾದ ರಾಜ್ಯವನ್ನು ಯಾರು ಸ್ಥಾಪಿಸುವರು? ಈ ಸ್ಥಾಪನೆಯು ಸಾಂಕೇತಿಕವಾಗಿ ಕನಸ್ಸಿನಲ್ಲಿ ಪ್ರತಿನಿಧೀಕರಿಸಲ್ಪಟ್ಟಿದೆ?
7. ನಿತ್ಯ ರಾಜ್ಯವು ಯಾವಾಗ ಸ್ಥಾಪಿಸಲ್ಪಡುವುದು?
8. ರೋಮನ್ ಸಾಮ್ರಾಜ್ಯವು ಯಾವ ರೀತಿಯ ರಾಜ್ಯವಾಗಿತ್ತು? ಕನಸ್ಸಿನಲ್ಲಿ ಅದು ಹೇಗೆ ಚಿತ್ರಿಸಲ್ಪಟ್ಟಿದೆ?
9. ದೇವರ ರಾಜ್ಯದ ವಿಸ್ತರಣೆಯನ್ನು ಈ ಕೆಳಗಿನ ವ್ಯಕ್ತಪಡಿಸುವಿಕೆಗಳಲ್ಲಿ ಯಾವುದು ಅತ್ಯುತ್ತಮವಾಗಿ ವಿವರಿಸುವುದು:

   (a) ಜಾಗತಿಕವಾದದ್ದಕ್ಕೆ ಸಣ್ಣದ್ದಾಗಿರುವುದು, (b) ಸಣ್ಣದಕ್ಕೆ ಜಾಗತಿಕವಾದ ದ್ದಾಗಿರುವುದು, (c) ಜಾಗತಿಕವಾದ್ದಕ್ಕೆ ಜಾಗತಿಕವಾದದ್ದಾಗಿರುವುದು?
10. ದೇವರ ರಾಜ್ಯದ ಬಲವು ಕನಸಿನಲ್ಲಿ ಹೇಗೆ ಸೂಚಿಸಲ್ಪಟ್ಟಿದೆ?
11. ದೇವರ ರಾಜ್ಯದ ನಿತ್ಯತ್ವವನ್ನು ತೋರಿಸಲಿಕ್ಕೆ ದಾನಿಯೇಲ 2ರಲ್ಲಿ ಯಾವ ವ್ಯಕ್ತಪಡಿಸುವಿಕೆಗಳು ಉಪಯೋಗಿಸಲ್ಪಟ್ಟಿರುತ್ತವೆ?

12. ದಾನಿಯೇಲನು ಮುಂತಿಳಿಸಿದ ರಾಜ್ಯ ಮತ್ತು ಸಭೆ ಒಂದೇಯಾಗಿವೆ ಎಂಬುದನ್ನು ವಿಮೋಚನೆಯಿಂದ ಮತ್ತು ಪರಿಶುದ್ಧ ಬರಹಗಳಿಂದ ಸಿದ್ಧಪಡಿಸಿರಿ.
13. ನಿತ್ಯರಾಜ್ಯದ ನಾಗರಿಕನಾಗುವುದರಿಂದ ಆಗುವ ಲಾಭಗಳನ್ನು ಯಾದಿ ಮಾಡಿರಿ.

© 2009 Truth for Today